ರೂಪಾಯಿನಷ್ಟು ಬೇಕಾಗಬಹುದು. ಇದರ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಏನಾದರೂ ಒಂದು ಮಾತು ಹೇಳಬೇಕು. ಆಮೇಲೆ ಕಾವೇರಿ ಕಣಿವೆಗೆ 54 ಕೋಟಿ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದೀರಿ. ಇದಕ್ಕೆ ಕಳೆದ ವರ್ಷಕ್ಕಿಂತ ಜಾಸ್ತಿ ಕೊಡುವುದಕ್ಕೆ ಆಗದಿದ್ದರೆ ಕೊನೆಯ ಪಕ್ಷ ಕಳೆದ ವರ್ಷದಷ್ಟಾದರೂ ಹಣ ಕೊಡದಿದ್ದರೆ ಹೇಗೆ? ಆದ್ದರಿಂದ ಕಳೆದ ವರ್ಷ ಕೊಟ್ಟಿರುವಷ್ಟು ಹಣವನ್ನಾದರೂ ಈ ವರ್ಷ ಕಾವೇರಿ ಕಣಿವೆಗೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಕೃಷಿ ಕಾರ್ಮಿಕರಿಗೆ 100 ಕೋಟಿ ರೂಪಾಯಿಯುಳ್ಳ ಒಂದು ಆರೋಗ್ಯ ನಿಧಿ ಮಾಡುತ್ತೇವೆ, ಕೃಷಿ ಕಾರ್ಮಿಕರಿಗೆ ಎಂಥ ಕಾಯಿಲೆ ಬಂದರೂ ಫ್ರೀಯಾಗಿ ಔಷಧಿ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ. ಎಂದು ಮಾನ್ಯ ಹಣಕಾಸಿನ ಸಚಿವರು ಆಯವ್ಯಯದಲ್ಲಿ ಮಂಡಿಸಿದ್ದರು. ಅದನ್ನು ನೀವು ಏನು ಮಾಡಿದ್ದೀರಿ ದಯವಿಟ್ಟು ಹೇಳಬೇಕು. ಅಂಗನವಾಡಿ ಸಹಾಯಕರಿಗೆ 75 ರೂಪಾಯಿ ಎಂದು ಮಾಡಿದ್ದೀರಿ ಅವರಿಗೆ ಇನ್ನೂ 75 ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕು. ಮಾನ್ಯ ಹಣಕಾಸಿನ ಸಚಿವರು ಏನೂ ಹೇಳುವುದಿಲ್ಲ. ಆಗುವುದಾದರೆ ಆಗುತ್ತದೆಂದು ಹೇಳಬೇಕು, ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳಬೇಕು. ಇನ್ನು ಶ್ರೀ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತುಕೊಳ್ಳುವ ಹಾಗೆ ಮಾಡಿದ್ದೀರಿ. ಅವರು ಏನು ಕೇಳಿದ್ದಾರೆ ಅದು ಎಲ್ಲರ ಮನಸ್ಸಿನಲ್ಲಿಯೂ ಇದೆ. ಕಡ್ಡಾಯವಾಗಿ ಒಬ್ಬ ಶಾಸಕರಿಗೆ ಪ್ರತೀ ವರ್ಷ 50 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಸರ್ಕಾರ ಆಲೋಚನೆ ಮಾಡಲೇಬೇಕು. ಈ ವಿಷಯದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರಿಗೆ ನನ್ನ ಪೂರ್ಣ ಬೆಂಬಲ ವ್ಯಕ್ತಪಡಿಸುತ್ತಾ ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ರೈತ ಸಂಘದ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ಅವರು ಸದನದ ಬಾವಿಗೆ ಆಗಮಿಸಿ ಧರಣಿ ಕುಳಿತರು).

ಶ್ರೀ ಸಿದ್ಧರಾಮಯ್ಯ :— ಮಾನ್ಯ ಅಧ್ಯಕ್ಷರೆ, ಅಗ್ರಿಕಲ್ಚರಲ್ ಪ್ರಾಡ್ಯೂಸ್ ಬಗ್ಗೆ ಹೊಸದಾಗಿ ಯಾವುದೂ ಟ್ಯಾಕ್ಸ್ ಹಾಕಿಲ್ಲ. ಈ ಬೀಡಿ ಎಲೆ ಮಧ್ಯಪ್ರದೇಶದಿಂದ ಬರುತ್ತದೆ ನಮ್ಮ ರಾಜ್ಯದಲ್ಲಿ ಇದನ್ನು ಬೆಳೆಯುವುದಿಲ್ಲ. ಇದು ಅಗ್ರಿಕಲ್ಚರಲ್ ಪ್ರಾಡ್ಯೂಸ್ ಅಲ್ಲ ಫಾರೆಸ್ಟ್ ಪ್ರಾಡ್ಯೂಸ್ ಆಗಿರುತ್ತದೆ. ಹೈಕೋರ್ಟ್ ಜಡ್ಜ್‌ಮೆಂಟ್ ಆದ ಮೇಲೆ ಅದನ್ನು ಹೊರಗಡೆ ಇಡುವುದಕ್ಕೆ ಮಾಡಿರತಕ್ಕಂಥ ಒಂದು ತಿದ್ದುಪಡಿ ಹೊರತು ಬೇರೆ ಏನೂ ಅಲ್ಲ. ಗೋಡಂಬಿ ಇದೆಯಲ್ಲಾ ಇದಕ್ಕೆ ಎರಡು ಪರ್ಸೆಂಟ್ ಅವರಿಗೆ ಲಾಭ ಪಡೆದುಕೊಳ್ಳುವುದಕ್ಕೆ, ಎಕ್ಸಂಪ್ಷನ್ ಪಡೆದುಕೊಳ್ಳಲಿಕ್ಕೆ ಅವಕಾಶ ಇದೆ. ಅದು ಮಾಡಬೇಕು. ಇನ್ನು ಟಿ.ಒ.ಟಿ. ಅಂದರೆ ಗೊಬ್ಬರದ ಬಗ್ಗೆ 4 ಪರ್ಸೆಂಟ್ ಟ್ಯಾಕ್ಸ್ ಇತ್ತು. 1998-99ರಲ್ಲಿ 4 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಇದ್ದುದನ್ನು ಸಂಪೂರ್ಣವಾಗಿ ವಜಾ ಮಾಡಿದ್ದೇವೆ.

ಶ್ರೀ ಬೈರೇಗೌಡ :— ಕಳೆದ ವರ್ಷ 4 ಪರ್ಸೆಂಟ್ ಟಿ.ಒ.ಟಿ ಇತ್ತು. ಕೊನೆಭಾಗದಲ್ಲಿ ಅದನ್ನು ಸಂಪೂರ್ಣವಾಗಿ ಎಕ್ಸೆಂಪ್ಟ್ ಮಾಡಿದ್ದೇವೆ.